(ಇಂದು ದಿನಾಂಕ:15-04-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀಸವಾಲು: ಪ್ರತಿವಾದಿಯರ ಪರ ವಕೀಲರಿಂದ:**

1. ನಾನು ಇರುವ ಮನೆಯ ಚಕಬಂದಿ ಹೇಳಬಲ್ಲೆ. ನನ್ನ ಮನೆಯ ಪೂರ್ವಕ್ಕೆ ಖಾಲಿ ಜಾಗೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಕೋರವರ ಮನೆ ಮತ್ತು ದಕ್ಷಿಣಕ್ಕೆ ರಸ್ತೆ ಇರುತ್ತದೆ. ನನ್ನ ಮನೆಯ ಉತ್ತರಕ್ಕೆ ಪ್ರತಿವಾದಿ ನಂ.2 ರವರ ಮನೆ ಇರುತ್ತದೆ. ಅದು ಕೂಡಾ ಪೂರ್ವ ದಿಕ್ಕಿಗೆ ಮುಖವಾಗಿದೆ. ಪಂಪಣ್ಣಗೌಡ ಪ್ರತಿವಾದಿ ನಂ.1 ರವರು ಛತ್ತಿನ ಮನೆಯಲ್ಲಿ ಇರುತ್ತಾರೆ. ನಾನು ದಾವಾ ಜಮೀನಿನಲ್ಲಿ ಎಕರೆಗೆ 15 ಚೀಲ ಜೋಳ ಬೆಳೆಯುತ್ತೇನೆ. ಪ್ರತಿವಾದಿಯರು ಸಹ ಜೋಳ ಬೆಳೆಯುತ್ತಾರೆ. ಸಾಕ್ಷಿ ಮುಂದುವರೆದು ನನಗೆ ಪ್ರತಿವಾದಿಯರು ಜಮೀನು ಕೊಟ್ಟಿಲ್ಲ, ನಾನು ಬೇರೆಯವರ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ.

2. ಸರ್ವೆ ನಂ.151 ಹೊರತುಪಡಿಸಿ ಉಳಿದ ಎಲ್ಲ ದಾವಾ ಜಮೀನುಗಳನ್ನು ನನ್ನ ತಂದೆ ಖರೀದಿ ಮಾಡಿದ್ದಾರೆ ಎಂದರೆ ಸರಿ. ನನ್ನ ತಂದೆಯವರು ಸರ್ವೆ ನಂ. 151 ಹೊರತುಪಡಿಸಿಉಳಿದ ಎಲ್ಲ ದಾವಾ ಜಮೀನುಗಳನ್ನು ಪ್ರತಿವಾದಿಯರಿಗೆ ಮತ್ತು ನನ್ನ ತಾಯಿ ಹೆಸರಿಗೆ ಖರೀದಿ ಮಾಡಿದ್ದಾರೆ ಎಂದರೆ ಸರಿ. ಅಮರೇಗೌಡರವರ ಹೆಂಡತಿ ತವರೂರು ಕಡಬೂರು ಎಂದರೆ ಸರಿ. ಅವರಿಗೆ 15-20 ಎಕರೆ ನೀರಾವರಿ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಅವರ ಬಳಿ ಟ್ರ್ಯಾಕ್ಟರ ಮತ್ತು ಹಿಟ್ಟಿನ ಗಿರಣಿ ಇದೆ ಎಂದರೆ ನನಗೆ ಗೊತ್ತಿಲ್ಲ. ಅವರೆಲ್ಲರೂ ಆರ್ಥಿಕವಾಗಿ ಸ್ಥಿತಿವಂತರು ಎಂದರೆ ನನಗೆ ಗೊತ್ತಿಲ್ಲ. ನನ್ನ ಅತ್ತಿಗೆ ಮತ್ತು ಅಣ್ಣ ಪ್ರೌಢ ಶಾಲೆ ಶಿಕ್ಷಕರು ಎಂದರೆ ನನಗೆ ಗೊತ್ತಿಲ್ಲ.

3. ದಾವೆ ಸಲ್ಲಿಸಲು ನಾನು ಬಸವರಾಜ ವಕೀಲರಿಗೆ ಮಾಹಿತಿ ಕೊಟ್ಟರು. ನನ್ನ ಅಕ್ಕ ನೀಲಮ್ಮ ಇವರ ಗಂಡ ಬಸವರಾಜ ವಕೀಲರು ಎಂದರೆ ಸರಿ. ನಾನು ನನ್ನ ಅಕ್ಕನ ಗಂಡನ ಮಾತು ಕೇಳಿ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

4. ವಾದಿ ನಂ.2 ಇವರಿಗೆ 100 ಎಕರೆ ಜಮೀನು ಇದೆ ಎಂದರೆ ಸರಿಯಲ್ಲ. ಅವರ ಮಗ ವಾದಿ ನಂ.2 ವೈದ್ಯರಾಗಿದ್ದು ಆರ್ಥಿಕವಾಗಿ ಸ್ಥಿತಿವಂತರಾಗಿರುತ್ತಾರೆ ಎಂದರೆ ಸರಿ. ಅಮರೇಶ ತಲೇಕಾನ, ಯಮನಪ್ಪ ತೊಗಸಿಹಾಳ, ನಾಗನಗೌಡ ಬಾವಿಗೌಡರು ಇವರೆಲ್ಲರೂ ನನಗೆ ಪರಿಚಯ. ಊರಲ್ಲಿ ಇವರು ನ್ಯಾಯಪಂಚಾಯತಿ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ 2018 ರಲ್ಲಿ ಮರಣ ಹೊಂದಿದ್ದಾರೆ. ನನ್ನ ತಂದೆಯವರು ಜೀವಂತ ಇದ್ದಾಗ ಭಾಗ ಹಂಚಿದ್ದಿಲ್ಲ ಎಂದರೆ ಸರಿ. ನಾವು ಅಣ್ಣ ತಮ್ಮಂದಿರು 2019 ಯುಗಾದಿ ದಿನದಂದು ಪಂಚರ ಸಮಕ್ಷಮ ಪಾಲುವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು ಬೇರೆಯವರ 2 ಎಕರೆ ರಾಜಶೇಖರರವರ ಜಮೀನನ್ನು ಲೀಜ್ ಆಧಾರದ ಮೇಲೆ ಬೇಸಾಯ ಮಾಡುತ್ತೇನೆ.

5. ಭಾಗ ಮಾಡಿಕೊಂಡಿದ್ದೇವೆ ಅಂತಾ ನಾನು ಗ್ರಾಮಲೆಕ್ಕಾಧಿಕಾರಿಗಳಿಗೆ ಯಾವುದೇ ಅರ್ಜಿ ಸಲ್ಲಿಸಿಲ್ಲ. ದಾವಾ ಐಟಮ್ ನಂ.4 ಪ್ರತಿವಾದಿ ನಂ.2 ಇವರ ಹೆಂಡತಿಯ ತವರು ಮನೆಯವರು ಪ್ರತಿವಾದಿ ನಂ.2 ರವರ ಖರೀದಿ ನೊಂದಣಿ ಪತ್ರ ಮಾಡಿಸಿರುತ್ತಾರೇ ಎಂದರೆ ಸರಿ. ನಾನು ಚಿಕ್ಕವನಾಗಿದ್ದೆ, ಕಾರಣ ಪ್ರತಿವಾದಿ ನಂ.2 ರವರ ಮದುವೆಯಲ್ಲಿ ಏನು ಮಾತುಕತೆ ಆಗಿರುತ್ತದೆ ನನಗೆ ಗೊತ್ತಿಲ್ಲ. ಅಮರೇಗೌಡರು ಖರೀದಿ ಮಾಡಿದ್ದು ಸುಳ್ಳು ಇದೆ ಅಂತಾ ನಾನು ಊರಲ್ಲಿ ಪಂಚಾಯತಿ ಮಾಡಿಲ್ಲ. ದಾವಾ ಐಟಮ್ ನಂ. 4 ಪ್ರತಿವಾದಿ ನಂ.2 ರವರೇ ಜಮೀನಿನ ಸಾಗುವಳಿ ಮಾಡುತ್ತಾರೆ ಸರಿಯಲ್ಲ. ಪ್ರತಿವಾದಿ ನಂ.2 ರವರ ಹೆಂಡತಿಯ ತವರು ಮನೆಯವರು ಸಾಲ ಸೌಲಭ್ಯ ಇತರೆ ಸೌಲಬಸ್ಯಿ ಪಡೆಯಲು ಅನುಕೂಲಕ್ಕೋಸ್ಕರ ಪ್ರತಿವಾದಿ ನಂ.2 ರವರ ಹೆಸರಿಗೆ ನೊಂದಣಿ ಪತ್ರ ಮಾಡಿಸಿದ್ದಾರೆ ಎಂದರೆ ಸರಿಯಲ್ಲ .

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಅವರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲಿಗಾಗಿ ಮುಂದಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರು